ದಿನಾಂಕಃ 06.12.2016 ರಂದು ಸಾಕ್ಷಿಯನ್ನು ಪುನಹಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಶ್ರೀ ಎಸ್‌ವಿಕೆ ವಕೀಲರಿಂದ

ದಾವಾ ಆಸ್ತಿಯು ಮೂಲತಃ 1 ಮತ್ತು 2ನೇ ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿ ಅಂದರೆ ಸರಿಯಲ್ಲ. ಇತರ ಆಸ್ತಿಗಳು ಚನ್ನಬಸನಗೌಡ ಹಾಗೂ ಯಲ್ಲನಗೌಡರವರ ಆಸ್ತಿ ಎಂದು ಒಟ್ಟು ಕುಟುಂಬದ ಒಳಗಡೆ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು 2ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ದಿಃ 11.4.07 ರಂದು 1 ಲಕ್ಷ ರೂಪಾಯಿ 62 ಸಾವಿರ ರೂಪಾಯಿಗಳಿಗೆ ದಾವಾ ಆಸ್ತಿಯ ಪ-ದಿಕ್ಕಿನ 5 ಎಕರೆ 31 ಗುಂಟೆ ಜಮೀನನ್ನು ಖರೀದಿಗೆ ಕೊಟ್ಟಿದ್ದರು ಎಂದರೆ ಹುಟ್ಟಿಸಿಕೊಂಡಿರುವ ದಾಖಲೆಯಾಗಿರುತ್ತದೆ ಎನ್ನುತ್ತಾರೆ. 3ನೇ ಪ್ರತಿವಾದಿಯಾದ ಬೋಜನಗೌಡ ಖರೀದಿಸುವ ಸಮಯದಲ್ಲಿ ಎಲ್ಲರ ಹೆಸರು ಇತ್ತು ಎಂದರೆ ಹುಟ್ಟಿಸಿಕೊಂಡಿರುವ ದಾಖಲೆಯಾಗಿರುತ್ತದೆ ಎನ್ನುತ್ತಾರೆ. ಖರೀದಿಯ ನಂತರ ಬೋಜನಗೌಡರವರು ಖರೀದಿಸಿದ ಆಸ್ತಿಯ ಹೆಸರನ್ನು ನಮೂದು ಮಾಡಿಕೊಡಲು ಹೆಸರನ್ನು ಕೊಟ್ಟಾಗ ನಾವು ತಕರಾರು ಮಾಡಿರುವುದಿಲ್ಲ. ಆದರೆ

ಅದು ಹುಟ್ಟಿಸಿದ ದಾಖಲೆ ಆಗಿರುತ್ತದೆ. 2007 ರಲ್ಲಿ ಉಪತಹಶೀಲ್ದಾರ ಬಂಕಾಪುರದಲ್ಲಿ ಒಂದು ಕಂದಾಯ ಅರ್ಜಿ ವಿಚಾರಣೆ ನಡೆದಿರುತ್ತದೆ ಎಂದರೆ ಸರಿ. ನಂತರ ಬೋಜನಗೌಡ ಖರೀದಿದಾರರು ಇದ್ದಾರೆ ಎಂದು ಡ ನಂಬರ ಮಂಜೂರು ಆಗಿತ್ತು ಎಂದರೆ ಇವತ್ತಿಗೂ ನಾವೇ ಮಾಲೀಕರು ಇದ್ದೇವೆ ಎಂದು ನುಡಿಯುತ್ತಾರೆ.

ಬಂಕಾಪುರ ಉಪತಹಶೀಲ್ದಾರರವರ ಆದೇಶವನ್ನು ಮೇಲ್ಮನವಿ ಮಾಡಿಲ್ಲ. ಪ್ರಶ್ನಿಸಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮೇಲ್ಮನವಿ ನಮ್ಮ ವಿರುದ್ದ ಆದೇಶವಾಗಿತ್ತು ಎಂದರೆ ಸುಳ್ಳು. ಬೋಜನಗೌಡರು ಖರೀದಿಸಿದ 5 ಎಕರೆ 31 ಗುಂಟೆ ಆಸ್ತಿಯ ಮಾಲೀಕರು ಮತ್ತು ಕಬ್ಜೆದಾರರು ಅವರೇ ಇರುತ್ತಾರೆ ಎಂದರೆ ಸುಳ್ಳು. 3ನೇ ಪ್ರತಿವಾದಿ ಖರೀದಿ ಹಿಡಿದ ದಿನದಿಂದಲೂ ನನಗೆ ಆ ವಿಷಯ ಗೊತ್ತಿತ್ತು ಎಂದರೆ ಸುಳ್ಳು. ಆಸ್ತಿಯ ಖಾತೆಯನ್ನು ಸೇರಿಸು ಎಂದು 3ನೇ ಪ್ರತಿವಾದಿ ಹೇಳಿದಾಗ ನನಗೆ ತಿಳಿಯಿತು. 2007 ನೇ ಇಸ್ವಿಯಲ್ಲಿ ಸೇರಿಸಲು ಅರ್ಜಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಯಾವಾಗ ತಕರಾರು ಕೊಟ್ಟಿದ್ದೇವು ಎಂದು ನನಗೆ ನೆನಪಿಲ್ಲ.

ಖರೀದಿ ಪತ್ರವನ್ನು ರದ್ದುಗೊಳಿಸಲು ಇದೇ ದಾವೆಯಲ್ಲಿ ಕೇಳಿಕೊಂಡಿರುತ್ತೇನೆ. 3ನೇ ಪ್ರತಿವಾದಿಯಾದ ಬೋಜನಗೌಡರನ್ನು ಬಿಟ್ಟು ಇನ್ನೊಂದು ಪ್ರಕರಣ ಮಾಡಿದ್ದೆ ಎಂದರೆ ಸರಿ. ಬೋಜನಗೌಡರವರನ್ನು ಉದ್ದೇಶಪೂರ್ವಕವಾಗಿ ಬಿಟ್ಟು ಪ್ರಕರಣ ದಾಖಲು ಮಾಡಿದ್ದೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ಖರೀದಿಸಿದ ಆಸ್ತಿ 5 ಎಕರೆ 31 ಗುಂಟೆ ಆಸ್ತಿಗೆ ಅವರೇ ಸಹ ಮಾಲೀಕರು ಹಾಗೂ ಕಬ್ಜೆದಾರರು ಇದ್ದಾರೆಂದರೆ ಸರಿಯಲ್ಲ. ಆಸ್ತಿ ಬಗ್ಗೆ ನನಗೆ ಯಾವುದೇ ಕಬ್ಜೆ ಮತ್ತು ಮಾಲೀಕತ್ವ ಇಲ್ಲದಿದ್ದರೂ ಸಹ ಆಸ್ತಿ ಕಬಳಿಸಬೇಕೆಂದು ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.